## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 82(61) |
| ಮಾನ್ಯ ಸದಸ್ಯರ ಹೆಸರು | ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 17.08.2026 |

| | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ವಿವಿಧ ಭಾಗಗಳಿಂದ ವಿದ್ಯಾಕಾಶಿ ಧಾರವಾಡ ಇಲ್ಲಿಗೆ ಸಾವಿರಾರು ವಿದ್ಯಾರ್ಥಿಗಳು NEET, KAS, IAS, PSI ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗಾಗಿ ಆಗಮಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಧಾರವಾಡ ಸೇರಿದಂತೆ ಇತರೆ ಪ್ರದೇಶಗಳ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವುದನ್ನು ಮನಗಂಡು, ಕಾಲೇಜು ಶಿಕ್ಷಣ ಇಲಾಖೆಯು 2020ನೇ ಸಾಲಿನಿಂದ "ವಿಜಯೀಭವ" (Vijayibhava) ಯುಟ್ಯೂಬ್ ಚಾನಲ್ ಮೂಲಕ ಡಿಜಿಟಲ್ ಶಿಕ್ಷಣ ಮತ್ತು ತರಬೇತಿಯನ್ನು ಈ ಉಪಕ್ರಮದಡಿ ಈ ಕೆಳಗಿನ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.<br><br>ಚಾನಲ್ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುತ್ತಿದ್ದು, ಪ್ರಸ್ತುತ ಈ ಯುಟ್ಯೂಬ್ ಚಾನಲ್ ಸುಮಾರು 6.03 ಲಕ್ಷಕ್ಕೂ ಅಧಿಕ ಚಂದಾದಾರರನ್ನು (Subscribers) ಹೊಂದಿದ್ದು, 734ಕ್ಕೂ ಹೆಚ್ಚು ಉಚಿತ ವೀಡಿಯೊಗಳನ್ನು ಅಪ್‌ಲೋಡ್ ಮಾಡಲಾಗಿದೆ.<br><br>ಇದರ ಸದುಪಯೋಗವನ್ನು ರಾಜ್ಯದ ಹತ್ತಾರು ಸಾವಿರಾರು ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ. ಉಚಿತ ವಿಡಿಯೋ ತರಗತಿಗಳು ಹಾಗೂ ಅಧ್ಯಯನ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದೆ.<br><br>ಕಾಲೇಜು ಶಿಕ್ಷಣ ಇಲಾಖೆಯಲ್ಲಿ (DCE) ಸೇವೆ ಸಲ್ಲಿಸುತ್ತಿರುವ ಹಾಗೂ ಸ್ಪರ್ಧಾತ್ಮಕ ಮತ್ತು ಸಿವಿಲ್ ಸರ್ವೀಸಸ್ ಬೋಧನಾ ಕ್ಷೇತ್ರದಲ್ಲಿ ಅನುಭವವಿರುವ ಪರಿಣಿತ ಶಿಕ್ಷಕರು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸಿ ಗುಣಮಟ್ಟದ ತರಬೇತಿ ಹಾಗೂ ಮಾರ್ಗದರ್ಶನವನ್ನು ನೀಡಲಾಗುತ್ತಿದೆ.<br><br>ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ನಗರ ಗ್ರಂಥಾಲಯ ಪ್ರಾಧಿಕಾರದ ಹಾಗೂ ಇಲಾಖೆಯ ಅನುಮೋದನೆ ಪಡೆದು ಧಾರವಾಡ ಮತ್ತು ಹುಬ್ಬಳ್ಳಿ ಪ್ರಧಾನ ಶಾಖೆಗಳು, ಸಪ್ತಾಪೂರ ಶಾಖೆ, ಮುರುಘಾಮಠ ಶಾಖೆ ಮೂರುಸಾವಿರಮಠ ಶಾಖೆ, ನಾರಾಯಣಪೂರ ಶಾಖೆ ಹಾಗೂ ಭೈರಿದೇವರಕೊಪ್ಪ ಶಾಖೆ ಗ್ರಂಥಾಲಯಗಳಲ್ಲಿ ವಿವಿ |

| | | |
|---|---|---|
| | | ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಕೆಗೆ ಅಗತ್ಯ ನೆರವು ನೀಡಲು ಕ್ರಮವಹಿಸಿದೆ. |
| (ಆ) | ಧಾರವಾಡ ನಗರದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಹಾಗೂ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಗ್ರಂಥಾಲಯ ಮತ್ತು ಉಚಿತ ಅಭ್ಯಾಸ ಕೋಣೆಗಳ (Reading Rooms) ಸಂಖ್ಯೆ ಎಷ್ಟು, (ವಿವರ ನೀಡುವುದು); | **ಶಾಲಾ ಶಿಕ್ಷಣ ಇಲಾಖೆ**<br>ಹುಬ್ಬಳ್ಳಿ-ಧಾರವಾಡ ನಗರ ಕೇಂದ್ರ ಗ್ರಂಥಾಲಯ ವ್ಯಾಪ್ತಿಯಲ್ಲಿ 55 ಶಾಖಾ/ಸೇವಾ ಕೇಂದ್ರ ವಾಚನಾಲಯಗಳು ಕಾರ್ಯ ನಿರ್ವಹಿಸುತ್ತಿವೆ. ಧಾರವಾಡ 05 ಕೋಣೆ ಮತ್ತು ಹುಬ್ಬಳ್ಳಿ 06-ಕೋಣೆ ಪ್ರಧಾನ ಶಾಖೆಗಳು ಸಸ್ತಾಪೂರ ಶಾಖೆ 02 ಕೋಣೆ, ಮುರುಘಾಮಠ ಶಾಖೆ 02 ಕೋಣೆ, ಮೂರುಸಾವಿರಮಠ ಶಾಖೆ 02 ಕೋಣೆ, ನಾರಾಯಣಪೂರ ಶಾಖೆ 04 ಕೋಣೆ, ಭೈರಿದೇವರಕೊಪ್ಪ ಶಾಖೆ 02 ಕೋಣೆಗಳಿವೆ. ಇನ್ನುಳಿದ ಗ್ರಂಥಾಲಯಗಳಲ್ಲಿ 01 ಕೋಣೆಗಳಿವೆ. ದೊಡ್ಡ ಗ್ರಂಥಾಲಯಗಳಲ್ಲಿ ಒಟ್ಟು ಕೋಣೆಗಳಿವೆ. ಇನ್ನುಳಿದ 46 ಮಧ್ಯಮ ಗ್ರಂಥಾಲಯಗಳಲ್ಲಿ 01 ಕೋಣೆಗಳಂತೆ 46 ಕೋಣೆಗಳಿವೆ. ಹುಬ್ಬಳ್ಳಿ-ಧಾರವಾಡ ನಗರ ಕೇಂದ್ರ ಗ್ರಂಥಾಲಯಗಳಲ್ಲಿ ಒಟ್ಟು 69 ಕೋಣೆಗಳು ಸಾರ್ವಜನಿಕ ಗ್ರಂಥಾಲಯ ಮತ್ತು ಉಚಿತ ಅಭ್ಯಾಸ ಕೋಣೆಗಳ (Reading Rooms) ಸೌಲಭ್ಯವಿದೆ. ವಿವರಗಳನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| (ಇ) | ನಗರದಲ್ಲಿ ಸರ್ಕಾರಿ ಗ್ರಂಥಾಲಯಗಳ ಹಾಗೂ ಕುಳಿತು ಓದಲು ಆಸನಗಳ ತೀವ್ರ ಅಭಾವವಿರುವುದರಿಂದ, ವಿದ್ಯಾರ್ಥಿಗಳು ಅನಿವಾರ್ಯವಾಗಿ ಖಾಸಗಿ ಸ್ಟಡಿ ರೂಮ್‌ಗಳನ್ನು (Reading Rooms) ಅವಲಂಬಿಸುತ್ತಿರುವುದು ಮತ್ತು ಖಾಸಗಿಯವರು ತಿಂಗಳಿಗೆ ದುಬಾರಿ ಶುಲ್ಕ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನದ ಹುಬ್ಬಳ್ಳಿ-ಧಾರವಾಡ ನಗರ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಗ್ರಂಥಾಲಯಗಳಲ್ಲಿ ಆಸನಗಳ ಅಭಾವವಿರುವುದಿಲ್ಲ. ಸಾರ್ವಜನಿಕ ಓದುಗರು ಗ್ರಂಥಾಲಯಗಳ ಸದುಪಯೋಗವನ್ನು ಪಡೆಯುತ್ತಿದ್ದಾರೆ. |
| (ಈ) | ವಿದ್ಯಾರ್ಥಿಗಳ ಮೇಲಿನ ಈ ಆರ್ಥಿಕ ಹೊರೆ ತಪ್ಪಿಸಲು ಧಾರವಾಡ ನಗರದಲ್ಲಿ ಆಧುನಿಕ ಸೌಲಭ್ಯಗಳನ್ನೊಳಗೊಂಡ ವಿಶಾಲವಾದ ಹೊಸ ಸರ್ಕಾರಿ ಗ್ರಂಥಾಲಯಗಳನ್ನು ಹಾಗೂ ಡಿಜಿಟಲ್ ಓದುವ ಕೋಣೆಗಳನ್ನು ಸ್ಥಾಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಧಾರವಾಡ ಮತ್ತು ಹುಬ್ಬಳ್ಳಿ ಪ್ರಧಾನ ಶಾಖೆಗಳು, ಸಪ್ತಾಪೂರ ಶಾಖೆ, ಮುರುಘಮಠ ಶಾಖೆ, ಮೂರುಸಾವಿರಮಠ ಶಾಖೆ, ನಾರಾಯಣಪೂರ ಶಾಖೆ, ಭೈರಿದೇವರಕೊಪ್ಪ ಶಾಖೆಗಳಲ್ಲಿ ಈಗಾಗಲೇ ಆಧುನಿಕ ಸೌಲಭ್ಯಗಳನ್ನೊಳಗೊಂಡ ಡಿಜಿಟಲ್ ಸೌಲಭ್ಯಗಳನ್ನು ಪೂರೈಸಲಾಗಿದೆ. ವಿದ್ಯಾರ್ಥಿಗಳು ಸದರಿ ಸೌಲಭ್ಯಗಳನ್ನು ಉಚಿತವಾಗಿ ಪಡೆಯುತ್ತಿದ್ದಾರೆ. |
| (ಉ) | ಖಾಸಗಿ ಸ್ಟಡಿ ರೂಮ್‌ಗಳ ಅನಿಯಂತ್ರಿತ ಶುಲ್ಕ ವಸೂಲಿಗೆ ಕಡಿವಾಣ ಹಾಕಲು ನಿಯಮಾವಳಿಗಳನ್ನು ರೂಪಿಸುವ ಹಾಗೂ ಧಾರವಾಡದಲ್ಲಿ ಸುಸಜ್ಜಿತ ಉಚಿತ ಸ್ಪರ್ಧಾತ್ಮಕ ಪರೀಕ್ಷಾ ಅಧ್ಯಯನ ಕೇಂದ್ರಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? | **ಕಾಲೇಜು ಶಿಕ್ಷಣ ಇಲಾಖೆ**<br>2026-27ನೇ ಸಾಲಿನ ಆರ್ಥಿಕ ಸಾಲಿನ ಆಯವ್ಯಯ ಭಾಷಣ ಕಂಡಿಕೆ-135ರಲ್ಲಿ ಧಾರವಾಡದಲ್ಲಿ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗಾಗಿ ತಲಾ ರೂ.10.00 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ ಹಾಗೂ ಅಧ್ಯಯನ ಕೇಂದ್ರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅನುದಾನದಿಂದ ಸ್ಥಾಪಿಸಲಾಗುವುದು ಎಂದು ಘೋಷಿಸಲಾಗಿದ್ದು, ಈ ಯೋಜನೆಯನ್ನು ಧಾರವಾಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿರುತ್ತದೆ. |

| | | |
|---|---|---|
| | | **ಶಾಲಾ ಶಿಕ್ಷಣ ಇಲಾಖೆ**<br>ಹುಬ್ಬಳ್ಳಿ ಹಾಗೂ ಧಾರವಾಡ ಪ್ರಧಾನ ಶಾಖೆಗಳಲ್ಲಿ ಒಂದ ದಿನಕ್ಕೆ ಕನಿಷ್ಠ ಒಂದು ಸಾವಿರ ವಿದ್ಯಾರ್ಥಿಗಳಿಗೆ ಉಚಿ ಸ್ಪರ್ಧಾತ್ಮಕ ಸೌಲಭ್ಯವನ್ನು ಪೂರೈಸಲಾಗಿದೆ. ಸಪ್ತಾಪೂರ ಶಾಖ ಮುರುಘಮಠ ಶಾಖೆ, ಮೂರುಸಾವಿರಮಠ ಶಾಖ ನಾರಾಯಣಪೂರ ಶಾಖೆ, ಭೈರಿದೇವರಕೊಪ್ಪ ಶಾಖೆಗಳಲಿ ಒಂದು ದಿನಕ್ಕೆ ಕನಿಷ್ಠ 300 ರಿಂದ 400 ವಿದ್ಯಾರ್ಥಿಗಳಿಗೆ ಉಚಿ ಸ್ಪರ್ಧಾತ್ಮಕ ಸೌಲಭ್ಯವನ್ನು ಪೂರೈಸಲಾಗಿದೆ. ಸಪ್ತಾಪೂರದ ಶ್ರಿ ನಗರದಲ್ಲಿ 4 ಗುಂಟೆ ನಿವೇಶನ ಪಡೆಯಲು ಗೋಕುಲ ಶಾಖೆಯ ನಿವೇಶನಕ್ಕಾಗಿ ಹುಬ್ಬಳ್ಳಿ-ಧಾರವಾಡ ನಗರಾಭಿವೃದಿ ಪ್ರಾಧಿಕಾರವನ್ನು ಕೋರಲಾಗಿದೆ.<br><br>ನವನಗರ, ಗಾಮನಗಟ್ಟಿ, ಎಂ.ಟಿ.ಎಸ್. ನಾಗಶೆಟ್ಟಿಕೊಪ್ಪ ಲ್ಯಾಮಿಂಗಟನ್ ಮತ್ತು ಸಪ್ತಾಪೂರ, ಪ್ರಧಾನ ಶಾಖೆ ಧಾರವಾ ಹಾಲಿ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಅಂದಾಜ ವೆಚ್ಚ, ನೀಲಿನಕ್ಷೆ ತಯಾರಿಸಿ ಕೊಡಲು ಲೋಕೋಪಯೋ ಇಲಾಖೆ ಮತ್ತು ನಿರ್ಮಿತಿ ಕೇಂದ್ರವನ್ನು ಕೋರಲಾಗಿದೆ. |

ಸಂಖ್ಯೆ: ಇಡಿ 100 ಅಅವಿ 2026

**(ಬಸವರಾಜ ರಾಯರೆಡ್ಡಿ)**
ಉನ್ನತ ಶಿಕ್ಷಣ ಸಚಿವರು

# ಅನುಬಂಧ-1

| ಶಾಖಾ ಗ್ರಂಥಾಲಯಗಳ ಹೆಸರು | ಕೋಣೆಗಳ ಸಂ. | ಸೇವಾ ಕೇಂದ್ರ ಗ್ರಂಥಾಲಯಗಳು | ಕೋಣೆಗಳ ಸಂ. | ವಾಚನಾಲಯಗಳು | ಕೋಣೆಗಳ ಸಂ. |
|---|---|---|---|---|---|
| ಪ್ರಧಾನ ಕಛೇರಿ, ಧಾರವಾಡ | 06 | ಕೇಂದ್ರ ಕಾರಾಗೃಹ, ಸೇವಾಕೇಂದ್ರ ಧಾರವಾಡ | 01 | ಪೋಲೀಸ್ ಹೆಡ್ಕ್ವಾರ್ಟರ್ಸ್, ವಾಚನಾಲಯ ಧಾರವಾಡ | 01 |
| ಮುರುಘಾಮಠ ಶಾಖೆ, ಧಾರವಾಡ | 02 | ಹೊಸಯಲ್ಲಾಪೂರ ಸೇವಾ ಕೇಂದ್ರ, ಧಾರವಾಡ | 01 | ಕೆ.ಎಸ್.ಆರ್.ಪಿ. 2ನೇ ಪಡೆ, ರಾಯಾಪೂರ ಉಪಘಟಕ, ವಾಚನಾಲಯ, ಹುಬ್ಬಳ್ಳಿ | 01 |
| ಲಕ್ಷ್ಮೀನಗರ ಶಾಖೆ, ಧಾರವಾಡ | 01 | ವಿಕಾಸನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಧಾರವಾಡ | 01 | ನೌಕರರ ಭವನ ವಾಚನಾಲಯ, ಧಾರವಾಡ | 01 |
| ಮಾನಸಿಕ ಆಸ್ಪತ್ರೆ ಶಾಖೆ, ಧಾರವಾಡ | 01 | ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತ ಭವನ, ಧಾರವಾಡ | 01 | ಝಾನ್ಸಿ ರಾಣಿ ಲಕ್ಷ್ಮೀಬಾಯಿ ಗ್ರಂಥಾಲಯ ಗುದಿರಾಮ್ ಬೋಸ್ ರಕ್ತದಾನಿಗಳ ಸಂಘ ವಿದ್ಯಾನಗರ, ವಾಚನಲಯ, ಹುಬ್ಬಳ್ಳಿ | 01 |
| ಸಪ್ತಾಪೂರ ಶಾಖೆ, ಧಾರವಾಡ | 02 | ಗಾಂಧಿನಗರ ನಿವಾಸಿಗಳ ಹಿತವರ್ಧಕ ಸಂಘ. ಹುಬ್ಬಳ್ಳಿ | 01 | ಉಪಕಾರಾಗೃಹ ವಾಚನಾಲಯ, ಹುಬ್ಬಳ್ಳಿ | 01 |
| ಸಾಧನಕೇರಿ/ನಾರಾಯಣಪೂರ ಶಾಖೆ, ಧಾರವಾಡ | 04 | ಸದಾಶಿವಾನಂದ ನಗರ ಸೇವಾಕೇಂದ್ರ, (ರೇಣುಕಾನಗರ) ಭೈರಿದೇವರಕೊಪ್ಪ, ಹುಬ್ಬಳ್ಳಿ | 01 | ನೇಕಾರನಗರ ( ಕಾಳಿಕಾ ಸಭಾಭವನ) ವಾಚನಾಲಯ, ಹುಬ್ಬಳ್ಳಿ | 01 |
| ಶುಕ್ರವಾರ ಪೇಟೆ ಶಾಖೆ, ಧಾರವಾಡ | 01 | ರಾಮಲಿಂಗೇಶ್ವರ ನಗರ ಶಿಕ್ಷಣ ಸಂಘ, ಸೇವಾಕೇಂದ್ರ, ಹುಬ್ಬಳ್ಳಿ | 01 | ಪ್ರೋಬಸ್ ಕ್ಲಬ್ ವಾಚನಾಲಯ, ಹುಬ್ಬಳ್ಳಿ | 01 |
| ಗರಗಸಿದ್ದಲಿಂಗಪ್ಪ ಶಾಖೆ, ಧಾರವಾಡ | 01 | ಎ.ಪಿ.ಎಂ.ಸಿ. ವಸತಿ ಗೃಹ ಸೇವಾಕೇಂದ್ರ ಅಮರಗೋಳ, ಹುಬ್ಬಳ್ಳಿ | 01 | ಜೆ.ಸಿ. ನಗರ ವಾಚನಾಲಯ, ಹುಬ್ಬಳ್ಳಿ | 01 |
| ಕಮಲಾಪೂರ ಶಾಖೆ, ಧಾರವಾಡ | 01 | ಲಕ್ಷ್ಮೀನಗರ ಸೇವಾಕೇಂದ್ರ, ಹುಬ್ಬಳ್ಳಿ | 01 | ಸಿಲ್ವರ್ ಟೌನ್ ವಾಚನಾಲಯ, ಹುಬ್ಬಳ್ಳಿ | 01 |
| ನವಲೂರ ಶಾಖೆ, ಧಾರವಾಡ | 01 | ಲಿಂಗರಾಜನಗರ ಶ್ರೀ ವೀರ ಅಂಜನೇಯ ದೇವಸ್ಥಾನ ಅಭಿವೃದ್ಧಿ ಸಮಿತಿ, ಹುಬ್ಬಳ್ಳಿ | 01 | ಸರಸ್ವತಿ ವಿದ್ಯಾರಣ್ಯ ಉಚಿತ ಗ್ರಂಥಾಲಯ ಕೇಶ್ವಾಪೂರ, ಹುಬ್ಬಳ್ಳಿ ಸರಸ್ವತಿ ವಿದ್ಯಾರಣ್ಯ ಉಚಿತ ವಾಚನಾಲಯ, ಹುಬ್ಬಳ್ಳಿ | 01 |
| ಕಲ್ಯಾಣನಗರ ಶಾಖೆ, ಧಾರವಾಡ | 01 | | | ಕರ್ನಾಟಕ ರಸ್ತೆ ಸಾರಿಗೆ ನಿಗಮ ವಾಚನಾಲಯ, ಹುಬ್ಬಳ್ಳಿ | 01 |
| ಕೆಲಗೇರಿ ಶಾಖೆ, ಧಾರವಾಡ | 01 | | | ಶಿರೂರ ಪಾರ್ಕ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಶಿರೂರ ಪಾರ್ಕ ವಾಚನಾಲಯ, ಹುಬ್ಬಳ್ಳಿ | 01 |
| ನವನಗರ ಶಾಖೆ, ಹುಬ್ಬಳ್ಳಿ | 01 | | | ಶಾಂತಿನಿಕೇತನ, ಹಿರಿಯನಾಗರಿಕರ ಕ್ಷೇಮಾಭಿವೃದ್ಧಿ ಸಂಘ, ಭೈರಿದೇವರಕೊಪ್ಪ ವಾಚನಾಲಯ ಹುಬ್ಬಳ್ಳಿ | 01 |

| | | | | | |
|---|---|---|---|---|---|
| ಪ್ರಧಾನ ಶಾಖೆ, ಹುಬ್ಬಳ್ಳಿ | 06 | | | ಪೋಲೀಸ್ ಕಮೀಷನರೇಟ್, ಕಾರವಾರ ರೋಡ, ವಾಚನಾಲಯ, ಹುಬ್ಬಳ್ಳಿ | 01 |
| ಹಳೇ-ಹುಬ್ಬಳ್ಳಿ ಶಾಖೆ, ಹುಬ್ಬಳ್ಳಿ | 01 | | | ಪೋಲಿಸ ವಸತಿ ಗೃಹಗಳ ಆವರಣ, ಆರಕ್ಷಕ ನಿರೀಕ್ಷಕರು ನಗರ ಸಶಸ್ತ್ರ ಮೀಸಲು ಪೋಲೀಸ್ ಪಡೆ, ಕಾರವಾರ ರೋಡ,ಹುಬ್ಬಳ್ಳಿ-ಧಾರವಾಡ, ವಾಚನಾಲಯ, | 01 |
| ರೇಲ್ವೆಕಾಲನಿ ಶಾಖೆ, ಹುಬ್ಬಳ್ಳಿ | 01 | | | ಜಿಲ್ಲಾ ನಿವೃತ್ತರ ಸಂಘ ವಾಚನಾಲಯ, ಧಾರವಾಡ | 01 |
| ಮೂರುಸಾವಿರಮಠ ಶಾಖೆ, ಹುಬ್ಬಳ್ಳಿ | 02 | | | ರೇಣುಕಾನಗರ ವಾಚನಾಲಯ, ಹುಬ್ಬಳ್ಳಿ | 01 |
| ಕೆ.ಎಂ.ಸಿ ಶಾಖೆ, ಹುಬ್ಬಳ್ಳಿ | 01 | | | ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ರೇಲ್ವೆ ಕಾಲೋನಿ, ವಾಚನಾಲಯ, ಹುಬ್ಬಳ್ಳಿ | 01 |
| ಘಂಟಿಕೇರಿ ಶಾಖೆ, ಹುಬ್ಬಳ್ಳಿ | 01 | | | ಕರ್ನಾಟಕ ರಾಜ್ಯ ಹಿರಿಯರ ನಾಗರಿಕರ ಹಾಗೂ ನಿವೃತ್ತ ನೌಕರರ ಸಂಘ ವಾಚನಾಲಯ ಹೊಸೂರು, ಹುಬ್ಬಳ್ಳಿ | 01 |
| ನಾಗಶೆಟ್ಟಿಕೊಪ್ಪ ಶಾಖೆ, ಹುಬ್ಬಳ್ಳಿ | 01 | | | | |
| ಉಣಕಲ್ ಶಾಖೆ, ಹುಬ್ಬಳ್ಳಿ | 01 | | | | |
| ಬೈರಿದೇವರಕೊಪ್ಪ ಶಾಖೆ, ಹುಬ್ಬಳ್ಳಿ | 02 | | | | |
| ಗೋಕುಲ ಶಾಖೆ, ಹುಬ್ಬಳ್ಳಿ | 01 | | | | |
| ಒಟ್ಟು ಕೋಣೆಗಳು | 40 | | 10 | | 19 |

ಉಪ ನಿರ್ದೇಶಕರು
ನಗರ ಕೇಂದ್ರ ಗ್ರಂಥಾಲಯ,
ಧಾರವಾಡ